ಸಾಕ್ಷಿಯನ್ನು 11.01.2023 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. **ಪಿ.ಡಬ್ಲ್ಯೂ-1**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದಃ

1. ನಿಪಿ 21 ವಾದಪತ್ರವನ್ನು ನನ್ನ ಚಿಕ್ಕಪ್ಪ ನನ್ನ ಅಜ್ಜಿ ಮತ್ತು ನನ್ನ ತಂದೆಯ ವಿರುದ್ದ ಮದ್ದೂರು ನ್ಯಾಯಾಲಯದಲ್ಲಿ ಹಾಕಿರುತ್ತಾರೆ. ನಿಪಿ 21 ನ್ನು ನಾನೆ ನಮ್ಮ ವಕೀಲರ ಮೂಲಕ ತರಿಸಿರುತ್ತೇನೆ. ಸದರಿ ದಾಖಲೆ ಪಡೆದುಕೊಳ್ಳಲು ಅರ್ಜಿಯನ್ನು ಮಳವಳ್ಳಿ ನ್ಯಾಯಾಲಯದಲ್ಲಿ ಹಾಕಿರುತ್ತೇನೆ. ನಿಪಿ 21 ನ್ನು ಈ ದಾವೆಯಲ್ಲಿ ಸಾಕ್ಷಿದಾರರಾಗಿ ವಿಚಾರಣೆಗೆ ಒಳಪಟ್ಟಿರುವ ಪಿಡಬ್ಲ್ಯೂ 3 ಶಿವಮಲ್ಲಯ್ಯರವರು ತಂದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾವೆಯ ವಿಚಾರವನ್ನು ಶಿವಮಲ್ಲಯ್ಯರವರು ನನಗೆ ತಿಳಿಸಿದ್ದು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮನ್ನು ಸೇರಿಸಲು ಅರ್ಜಿಯನ್ನು ಹಾಕಿರುವುದಿಲ್ಲ ಏಕೆಂದರೆ ಆ ದಾವೆಯ ಬಗ್ಗೆ ನನಗೆ ಇತ್ತೀಚೆಗೆ ಗೊತ್ತಾಗಿರುತ್ತದೆ. ಪ್ರಸ್ತುತ ದಾವೆಯನ್ನು ನಾನು ಶಿವಮಲ್ಲಯ್ಯರವರ ಚಿತಾವಣೆ ಮೇರೆಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ 8 ಎಂದು ಗುರುತಿಸಲಾಯಿತು. ಸದರಿ ದಾಖಲೆಯು ನಾನು ಪ್ರಸ್ತುತ ದಾವೆಯ 1 ನೇ ಪ್ರತಿವಾದಿಗೆ ವಕೀಲರ ಮೂಲಕ ಕಳುಹಿಸಿರುವ ನೋಟಿಸ್ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ನೋಟಿಸಿನಲ್ಲಿ ನನಗೆ ಶಿಲ್ಪ ಎಂಬ ಅಕ್ಕ ಕೂಡ ಇದ್ದಾರೆ ಎಂದು ತಿಳಿಸಿದ್ದೇನೆ ಎಂದರೆ ಸಾಕ್ಷಿ ನನ್ನ ತಂದೆಗೆ ನಾನು ಒಬ್ಬಳೆ ಮಗಳು ಎಂದು ನುಡಿದಿರುತ್ತಾರೆ. ಸಾಕ್ಷಿ ನಿಡಿ 8 ನ್ನು ನೋಡಿ ಅದರಲ್ಲಿ ನನಗೆ ಶಿಲ್ಪ ಎಂಬ ಅಕ್ಕ ಇದ್ದಾರೆ ಎಂಬುವುದು ಸರಿ ಎಂದು ನುಡಿದಿರುತ್ತಾರೆ. ಸದರಿ ನೋಟಿಸನ್ನು ದಿಃ 4.2.2013 ರಂದು ಕೊಟ್ಟಿರುವುದು ಎಂದರೆ ಸರಿ. ಸದರಿ ನೋಟಿಸಿಗೆ 1 ನೇಪ್ರತಿವಾದಿ ಗಂಗಮ್ಮ ಪ್ರತ್ಯುತ್ತರ ಪತ್ರ ದಿಃ 23.07.2013 ರಂದು ನೀಡಿರುವ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು 1 ನೇ ಪ್ರತಿವಾದಿ ನೀಡಿರುವ ಪ್ರತ್ಯುತ್ತರ ಪತ್ರ ಆಗಿದ್ದು ಅದನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ದಾಖಲೆಯನ್ನು ನಿಡಿ 9 ಎಂದು ಗುರುತಿಸಲಾಯಿತು. ಸದರಿ ನೋಟಿಸಿನಲ್ಲಿ 1 ನೆ ಪ್ರತಿವಾದಿ 4 ನೇ ಪ್ಯಾರಾದಲ್ಲಿ ದಾವಾ ಆಸ್ತಿಗಳು ತನಗೆ ಸರ್ಕಾರದಿಂದ ಮಂಜೂರಾಗಿರುವ ಆಸ್ತಿಗಳು ಎಂದು ತಿಳಿಸಿದ್ದಾರೆ ಎಂದರೆ ಸರಿ. ಶಿಲ್ಪ ಎಂಬುವವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಏಕೆಂದರೆ ನನ್ನ ತಂದೆಗೆ ನಾನು ಒಬ್ಬಳೆ ಮಗಳು ಆಗಿರುತ್ತೇನೆ. ನಾನು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದವಳು ಅಲ್ಲ ಎಂದರೆ ಸರಿಯಲ್ಲ. ಶಿವಮಲ್ಲಯ್ಯರವರ ಚಿತಾವಣೆ ಮೇರೆಗೆ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ